‘ಇಲ್ಲ ಇಲ್ಲ ಇಲ್ಲ... ಹಾಗೆ ಮಾಡಿದರೆ ನನ್ನ ಮಗನ ಗತಿಯೇನು? ಆತನಿಗೆ ಹೇಗೆ ಚಿಕಿತ್ಸೆ ಕೊಡಿಸಲಿ? ನನ್ನ ಕನಸುಗಳ ಕಥೆಯೇನು? ಇದು ನನ್ನ ಅದೃಷ್ಟದ ಹಣ. ಹಾಗಾಗಿ ಇದನ್ನು ಹಿಂದಿರುಗಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ...’

ಅಮನ್‌ಗೆ ಡಾಕ್ಟರ್ ಮಾತು ನೆನಪಾಯಿತು. ‘ಕೇವಲ ಅದೃಷ್ಟ, ಶುಭಹಾರೈಕೆ ಮಾತ್ರ ನಿನ್ನ ಮಗನನ್ನು ಕಾಪಾಡಬಲ್ಲದು...’

‘ಅವೆಲ್ಲ ಅರ್ಥಹೀನ ಮಾತುಗಳು...’ ಎಂದುಕೊಳ್ಳುತ್ತಲೇ ಆತ ಆಸ್ಪತ್ರೆಯನ್ನು ಪ್ರವೇಶಿಸಿದ. ಮುಂಬೈನಿಂದ ಬಂದಿದ್ದ ಹಿರಿಯ ವೈದ್ಯರು ಅಲ್ಲಿಯೇ ಇದ್ದರು. ಅವರನ್ನು ಭೇಟಿಯಾಗಿ ಆತ ತನ್ನ ಮಗನ ಆರೋಗ್ಯದ ಬಗ್ಗೆ ವಿಚಾರಿಸಿದ.

‘‘ಡಾಕ್ಟರ್, ನನ್ನ ಮಗನಿಗೆ ಎಲ್ಲಿ ಚಿಕಿತ್ಸೆ ನೀಡಿದರೆ ಆತ ಬದುಕುಳಿಯಬಲ್ಲ? ಮುಂಬೈಗೆ ಹೋಗಬೇಕೆಂದರೂ ಸರಿ, ವಿದೇಶಕ್ಕೆ ಹೋಗಬೇಕೆಂದರೂ ಸರಿ. ನಾನು ಹಣದ ವ್ಯವಸ್ಥೆ ಮಾಡುತ್ತೇನೆ. ನೀವು ಚಿಕಿತ್ಸೆಗೆ ತಯಾರಿ ಮಾಡಿಕೊಳ್ಳಿ...’’

ಡಾಕ್ಟರ್ ಆತನನ್ನು ಸಮಾಧಾನಿಸುವ ಧ್ವನಿಯಲ್ಲಿ ಹೇಳಿದರು, ‘‘ವಿದೇಶದಲ್ಲಿ ಆಗುವುದಿದ್ದರೆ ನಾನೇ ಹೇಳುತ್ತಿದ್ದೆ. ನಿಮ್ಮ ಮಗನ ರೋಗಕ್ಕೆ ಚಿಕಿತ್ಸೆಯೇ ಇಲ್ಲ. ನನಗೆ ಈಗ ಯಾವುದೇ ಭರವಸೆಯೂ ಉಳಿದಿಲ್ಲ.’’

‘‘ಡಾಕ್ಟರ್, ಹಣದಿಂದ ಯಾವುದು ಸಾಧ್ಯವಿಲ್ಲ? ಪ್ಲೀಸ್, ಪ್ರಯತ್ನ ಮಾಡಿ...’’

ಡಾಕ್ಟರ್ ನಿರಾಸೆಯ ಧ್ವನಿಯಲ್ಲಿ, ‘‘ಹಣದಿಂದ ಎಲ್ಲವೂ ಸಾಧ್ಯವಾಗುವುದಾಗಿದ್ದರೆ, ಯಾವುದೇ ಶ್ರೀಮಂತ ವ್ಯಕ್ತಿ ಜಗತ್ತಿನಲ್ಲಿ ಸಾಯುತ್ತಲೇ ಇರಲಿಲ್ಲ...’’ ಎಂದು ಹೇಳುತ್ತಲೇ ಅಲ್ಲಿಂದ ಎದ್ದುಹೋದರು.

ಸ್ವಲ್ಪ ಹೊತ್ತು ಅಮನ್ ಏಕಾಂತದಲ್ಲಿ ಕುಳಿತು ಯೋಚಿಸತೊಡಗಿದ. ಯಾವುದೋ ನಿರ್ಧಾರಕ್ಕೆ ಬಂದಿದ್ದ. ಮನದ ಗೊಂದಲ ದೂರವಾಗಿತ್ತು. ಆತ ಅಲ್ಲಿಂದ ನೇರವಾಗಿ ಮನೆಗೆ ಹೋಗಿ, ಬೀರುವಿನಿಂದ ಬ್ಯಾಗನ್ನು ಹೊರತೆಗೆದ; ತನ್ನ ಕಿಸೆಯಲ್ಲಿದ್ದ ನೋಟುಗಳನ್ನು ಒಟ್ಟಾಗಿಸಿ ಅವುಗಳಲ್ಲಿ ಎರಡು ಸಾವಿರವನ್ನು ಎಣಿಸಿ ಬ್ಯಾಗ್‌ಗೆ ಸೇರಿಸಿದ. ಮನೆಗೆ ಬೀಗ ಹಾಕಿ, ಆಟೊ ಏರಿ ಮುನ್ನಡೆಸತೊಡಗಿದ. ಆಟೊ ಕಾಂಕೇಯ ಕಡೆಗೆ ಮುಖಮಾಡಿತ್ತು. ಅಮನ್‌ನ ಮನಸ್ಸಿನಲ್ಲಿ ಒಂದು ಗಣಿತ ಮೂಡಿ ಮರೆಯಾಯಿತು ‘ಒಂದಕ್ಕಿಂತ ನಾಲ್ಕು ಅಧಿಕ; ಸ್ವಂತದ್ದಾದರೂ ಸರಿ, ಬೇರೆಯವರದ್ದಾದರೂ ಸರಿ.’


## ನಾಗ ಎಚ್. ಹುಬ್ಳಿ

ಮೂಲತಃ ಹುಬ್ಬಳ್ಳಿಯವರು. ಪತ್ರಿಕೋದ್ಯಮ ಮತ್ತು ಕನ್ನಡದಲ್ಲಿ ಎಂ.ಎ. ಪದವೀಧರ. ಕೆಲಕಾಲ ಪತ್ರಕರ್ತರಾಗಿ ಕೆಲಸ. ಪ್ರಸ್ತುತ ಜಾರ್ಖಂಡ್‌ನ ರಾಂಚಿ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ. ಕಳೆದ 14 ವರ್ಷಗಳಿಂದ ಜಾರ್ಖಂಡ್, ಬಿಹಾರ, ಒಡಿಶಾ, ಪಶ್ಚಿಮ ಬಂಗಾಳ, ಛತ್ತೀಸಗಡ, ನಿಕೋಬಾರ್ ದ್ವೀಪ, ಉತ್ತರಾಖಂಡ ಮುಂತಾದ ರಾಜ್ಯಗಳ ಆದಿವಾಸಿಗಳ ನೆಲೆಗಳಿಗೆ ಭೇಟಿ ಕೊಟ್ಟು ಅವರ ಕುರಿತು ಜನಾಂಗೀಯ ಅಧ್ಯಯನ ನಡೆಸುತ್ತಿದ್ದಾರೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಅವರ ‘ಸರಹುಲ್’ (ನಾಗಪುರಿ ಜನಪದ ಕಥೆಗಳು) ಮತ್ತು ‘ಜಾರ್ಖಂಡ್ ಆದಿವಾಸಿ ಬದುಕು’ ಪುಸ್ತಕಗಳನ್ನು ಪ್ರಕಟಿಸಿದೆ.